ಆ) ಸಂಸ್ಥೆಯು 2001-02ನೇ ಸಾಲಿನ ಆಯವ್ಯಯದಲ್ಲಿ 65.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸದರಿ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡು ನಂತರದಲ್ಲಿ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ವಿಜಾಪುರದಿಂದ-ಬೆಂಗಳೂರಿಗೆ ಹಾಲಿ ಕಾರ್ಯಾಚರಣೆಯಲ್ಲಿರುವ ವಾಹನ ಸಂಖ್ಯೆ:ಕೆಎ28:ಎಫ್-975 ಮತ್ತು ಎಫ್-976ಗಳು ಕೇವಲ 80,000 ಕಿ.ಮೀ.ಗಳನ್ನು ಕ್ರಮಿಸಿದ್ದು ಉಳಿದ 2 ವಾಹನಗಳ ಸಂಖ್ಯೆ:ಕೆಎ-28:ಎಫ್-842, 843 ವಾಹನಗಳು 3.00 ಲಕ್ಷ ಕಿ.ಮೀ. ಕ್ರಮಿಸಿದ್ದು ಸುಸ್ಥಿತಿಯಲ್ಲಿರುತ್ತವೆ. ಆದಾಗ್ಯೂ ಹೊಸ ಬಸ್‌ನ್ನು ನಿಯುಕ್ತಿಗೊಳಿಸುವ ವಿಷಯವನ್ನು ಸೂಕ್ತ ಕಾಲದಲ್ಲಿ ಪರಿಶೀಲಿಸಲಾಗುವುದು.

ಶಿವಮೊಗ್ಗ ನಗರ ಪಾಲಿಕೆ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 920(1048)

ಸದಸ್ಯರ ಹೆಸರು: ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ)

ಪ್ರಶ್ನೆ

1. ಶಿವಮೊಗ್ಗ ನಗರ ಸಭೆಯನ್ನು ಮಹಾ ನಗರ ಪಾಲಿಕೆಯನ್ನಾಗಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ? ಇದಕ್ಕೆ ಅರ್ಹತೆ ಇರುವ ಜನಗಣತಿ ಎಷ್ಟಿದೆ? (ವಿವರ ನೀಡುವುದು)

ಉತ್ತರಿಸುವ ಸಚಿವರು: ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಉತ್ತರ

1. 1976ರ ಕೆ.ಎಂ.ಸಿ. ಕಾಯ್ದೆಯಂತೆ ನಗರ ಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಬೇಕಾದಲ್ಲಿ ಕನಿಷ್ಟ 3 ಲಕ್ಷ ಜನಸಂಖ್ಯೆ ಇರಬೇಕಾಗಿದೆ. ಆದರೆ ಶಿವಮೊಗ್ಗ ನಗರ ಸಭೆಯ ಜನಸಂಖ್ಯೆ ಹಾಲಿ ಜನಗಣತಿ ಇಲಾಖೆಯ ಮಾಹಿತಿಯಂತೆ 2,74,105 ಇರುತ್ತದೆ. ಆದುದರಿಂದ ಶಿವಮೊಗ್ಗ ನಗರ ಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸುವುದನ್ನು ಸದ್ಯಕ್ಕೆ ಪರಿಗಣಿಸಲಾಗುವುದಿಲ್ಲ

ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 921(1047)

ಸದಸ್ಯರ ಹೆಸರು: ಮಾನ್ಯ ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ)

ಪ್ರಶ್ನೆ

1. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ ವರ್ಷಗಳಲ್ಲಿ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು?

2. ಹಂಚಿಕೆಯಾಗಿ ನಿವೇಶನ ಪಡೆಯದೆ ಇರುವವರ ಸಂಖ್ಯೆ ಎಷ್ಟು?

3. ಈ ರೀತಿ ಉಳಿದ ನಿವೇಶನಗಳನ್ನು ಯಾವ ರೀತಿ ಹಂಚಿಕೆ ಮಾಡಲಾಗಿದೆ? (ವಿವರ ನೀಡುವುದು)

4. ಇದರಿಂದ ಎಷ್ಟು ಹಣ ಬಂದಿದೆ ತಿಳಿಸುವುದು?

5. ಖಾಸಗಿ ಬಡಾವಣೆ ನಿರ್ಮಿಸಲು ಎಷ್ಟು ಜನರಿಗೆ ಮತ್ತು ಎಷ್ಟು ಎಕರೆ ಪ್ರದೇಶಕ್ಕೆ ಮಂಜೂರಾತಿ ನೀಡಲಾಗಿದೆ? (ವಿವರ ನೀಡುವುದು)

6. ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಮಾಡಲು ಎಷ್ಟು ಎಕರೆ ಪ್ರದೇಶವನ್ನು ಪ್ರಾರಂಭಿಕ ಹಂತದಲ್ಲಿ ತೆಗೆದುಕೊಳ್ಳಲಾಗಿದೆ? ಇಂತಹ ಪ್ರದೇಶಗಳನ್ನು ಖಾಸಗಿಯವರಿಗೆ ಎಷ್ಟು ಎಕರೆ ವಾಪಸ್ ಮಾಡಲಾಗಿದೆ? (ವಿವರ ನೀಡುವುದು)

7. ಕಳೆದ ಎರಡು ವರ್ಷಗಳಲ್ಲಿ ಎಷ್ಟು ಮೊತ್ತದ ಕಾಮಗಾರಿ ಕೆಲಸಗಳು ನಡೆದಿರುತ್ತವೆ. ಇದರಲ್ಲಿ ಟೆಂಡರ್ ಮೂಲಕ ಮಾಡಿದ ಮತ್ತು ಪೀಸವರ್ಕ್‌ನಲ್ಲಿ ಮಾಡಿದ ಕಾಮಗಾರಿ ಕೆಲಸಗಳು ಎಷ್ಟು? ಹಾಗು ಹಣ ಎಷ್ಟು?

ಉತ್ತರಿಸುವ ಸಚಿವರು: ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಉತ್ತರ

1. 1914

2. 32

3. ತುಂಗಾ ಚಾನಲ್ ಕಾಮಗಾರಿ ಕೆಲಸದಲ್ಲಿ ನಿವೇಶನ ಕಳೆದುಕೊಂಡಾಗ ಬದಲಿಯಾಗಿ ನೀಡಿದೆ.

4. ರೂ.9,32,30,120-00

5. ಖಾಸಗಿ ಬಡಾವಣೆ ನಿರ್ಮಿಸಲು 69 ಜನರಿಗೆ 140 ಎಕರೆ 24 ಗುಂಟೆ ಪ್ರದೇಶಕ್ಕೆ ಮಂಜೂರಾತಿ ನೀಡಲಾಗಿದೆ.

6. 515 ಎಕರೆ 32 ಗುಂಟೆ ಪ್ರಾರಂಭಿಕ ಹಂತದಲ್ಲಿ ತೆಗೆದುಕೊಳ್ಳಲಾಗಿದೆ. ಖಾಸಗಿಯವರಿಗೆ 6-17 ಎಕರೆ ಪಾಪಸ್ ಬಿಡಲಾಗಿದೆ.

7. 557,963 ಲಕ್ಷ ರೂ.ಮೊತ್ತದ ಕಾಮಗಾರಿ ಕೆಲಸಗಳು ನಡೆದಿರುತ್ತವೆ. ಅದರಲ್ಲಿ ಟೆಂಡರ್ ಮೂಲಕ 8 ಕಾಮಗಾರಿ ಕೆಲಸಗಳನ್ನು ನಿರ್ವಹಿಸಿದ್ದು ಒಟ್ಟು ಮೊತ್ತ ರೂ.206.25 ಲಕ್ಷಗಳಾಗಿರುತ್ತದೆ. ಅದರಲ್ಲಿ ಇಲ್ಲಿಯವರೆಗೆ 24.75 ಲಕ್ಷ ರೂ.ಗಳನ್ನು ಪಾವತಿಸಲಾಗಿದೆ. ಪೀಸ್‌ವರ್ಕ್ ಮೂಲಕ 935 ಕಾಮಗಾರಿ ಕೆಲಸಗಳನ್ನು ನಿರ್ವಹಿಸಿದ್ದು ಒಟ್ಟು ಮೊತ್ತ 360.46 ಲಕ್ಷ ರೂ.ಗಳಾಗಿರುತ್ತವೆ. ಅದರಲ್ಲಿ ಇಲ್ಲಿಯವರೆಗೆ 309.00 ಲಕ್ಷ ರೂ.ಗಳನ್ನು ಪಾವತಿಸಲಾಗಿದೆ.

ರಾಜ್ಯದಲ್ಲಿ ನೀರಾ ತೆಗೆಯುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 922(1046)

ಸದಸ್ಯರ ಹೆಸರು: ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ)

ಪ್ರಶ್ನೆ

ಅ) ರಾಜ್ಯದಲ್ಲಿ ನೀರಾ ತೆಗೆಯಲು ಸರ್ಕಾರ ಅನುಮತಿ ನೀಡಿದೆಯೇ? (ವಿವರ ನೀಡುವುದು)

ಉತ್ತರಿಸುವ ಸಚಿವರು: ಶ್ರೀ ಎಂಎಂ.ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಉತ್ತರ

ಅ) ರೈತರ ಸಹಕಾರ ಸಂಘಗಳ ಮತಿಯಿಂದ ನೀರಾ ಅನ್ನು ಇಳಿಸಿ ನೀರಾ ರೂಪದಲ್ಲೇ ಮಾರಾಟ ಮಾಡುವಂತೆ ಅವಕಾಶ ಕಲ್ಪಿಸಲು ಪ್ರಸ್ತಾಪಿಸಲಾಗಿದೆ.